# ತಣ್ಣಗಿನ ಮಿಶ್ರಾಗೆ ಈಗಲೂ ಹರ್ಷ

**ಈ ಸಲದ ಐಪಿಎಲ್‌ನಲ್ಲಿ ಅಮಿತ್ ಮಿಶ್ರಾ 'ಲಖನೌ ಸೂಪರ್ ಜೈಂಟ್ಸ್' ತಂಡದ ಪರವಾಗಿ ಮಿಂಚುತ್ತಿದ್ದಾರೆ. ಅವರು 172 ವಿಕೆಟ್ ಪಡೆದ ಸಾಧನೆಯಿಂದಾಗಿ ಹೆಚ್ಚು ವಿಕೆಟ್ ಪಡೆದವರ ಯಾದಿಯಲ್ಲಿ ಮೂರನೇ ಹೆಸರು ಗಳಿಸಿದ್ದಾರೆ.**

■ ವಿಶಾಖ ಎನ್.




ಮೇ 1ರಂದು ಲಖನೌದಲ್ಲಿ ನಡೆದ ಪಂದ್ಯದಲ್ಲಿ ಫಾಫ್ ಡು ಪ್ಲೆಸಿಸ್ ವಿಕೆಟ್ ಪಡೆದ ಕ್ಷಣದ ಸಂಭ್ರಮ

2008ರ ಅಕ್ಟೋಬರ್ 17ರಂದು ಆಸ್ಟ್ರೇಲಿಯಾ ಎದುರು ಮೊಹಾಲಿಯಲ್ಲಿ ಎರಡನೇ ಟೆಸ್ಟ್ ಪಂದ್ಯ ಶುರುವಾಯಿತು. ಅನಿಲ್ ಕುಂಬ್ಳೆ ಗಾಯಗೊಂಡಿದ್ದರಿಂದ ಅಮಿತ್ ಮಿಶ್ರಾಗೆ ಆ ಪಂದ್ಯದಲ್ಲಿ ಅವಕಾಶ ಸಿಕ್ಕಿತ್ತು. 2003ರಲ್ಲೇ ಏಕದಿನ ಪಂದ್ಯಗಳನ್ನು ಆಡಲು ಶುರುಮಾಡಿದ್ದ ಅಮಿತ್ ಮಿಶ್ರಾ, ಟೆಸ್ಟ್ ಕನಸು ನನಸಾಗಲು ಇನ್ನೂ ಐದು ವರ್ಷಗಳ ಕಾಯಬೇಕಾದದ್ದು ಅನಿವಾರ್ಯವೇ ಆಗಿತ್ತು. ಕುಂಬ್ಳೆ, ಹರಭಜನ್ ಸಿಂಗ್ ನೇತೃತ್ವದ ಸ್ಪಿನ್ ದಾಳಿಯನ್ನು ಭಾರತ ಅಷ್ಟರಮಟ್ಟಿಗೆ ನೆಚ್ಚಿಕೊಂಡಿತ್ತು.

ಮಿಶ್ರಾ ಮೊದಲ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಬೌಲಿಂಗ್ ಮಾಡಲು ಅವಕಾಶ ಪಡೆದಾಗ ಅವರ ಮೇಲೆ ನೆಟ್ಟಿದ್ದ ಕಣ್ಣುಗಳು ಅಸಂಖ್ಯ. ಮಹೇಂದ್ರ ಸಿಂಗ್ ಧೋನಿ ವಿಕೆಟ್ ಹಿಂದೆ ನಿಂತು ಅವರಿಗೆ ನಿಯಮಿತವಾಗಿ ಪಾಠ ಹೇಳುತ್ತಿದ್ದರು. ತಾವು ಹಾಕಿದ ಹದಿನೆಂಟನೇ ಎಸೆತದಲ್ಲಿ ಆಸ್ಟ್ರೇಲಿಯಾದ ಸಿಮೊನ್ ಕ್ಯಾಟಿಚ್ ಲೆಗ್ ಸ್ಪಿನ್ ಅಂದಾಜು ಮಾಡುವಲ್ಲಿ ಎಡವಿದರು. ಚೆಂಡು ಬ್ಯಾಟನಂಚಿಗೆ ತಾಗಿ, ಲೆಗ್‌ಸ್ಟಂಪ್‌ಅನ್ನು ಉರುಳಿಸಿತ್ತು. ಅದಾದ ಮೇಲೆ ರೌಂಡ್ ದಿ ವಿಕೆಟ್ ಬೌಲ್ ಮಾಡಿ, ಮೈಕಲ್ ಕ್ಲಾರ್ಕ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಸ್ಪಿನ್ ಆಗಬಹುದು ಎಂದು ಬ್ಯಾಟ್ಸ್‌ಮನ್ ಅಂದಾಜಿಸಿದ್ದು ಸುಳ್ಳಾಯಿತು. ಕೆಮರೂನ್ ವೈಟ್ ಬೌಲ್ಡ್ ಆದದ್ದು ಇದೇ ಮಿಶ್ರಾ ಹಾಕಿದ ಗೂಗ್ಲಿಯಿಂದ. ಮೊದಲ ಇನಿಂಗ್ಸ್‌ನಲ್ಲೇ ಐದು ವಿಕೆಟ್‌ಗಳ ಗೊಂಚಲು ಕಿತ್ತ ಅಮಿತ್, ಕುಂಬ್ಳೆ ಅನುಪಸ್ಥಿತಿಯ ಲಾಭವನ್ನು ಚೆನ್ನಾಗಿಯೇ ಪಡೆದುಕೊಂಡಿದ್ದರು.

ಈ ಸಲ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅಮಿತ್ ಮಿಶ್ರಾ ಲಖನೌ ಸೂಪರ್ ಜೈಂಟ್ಸ್ ತಂಡದ ಪರವಾಗಿ ಆಡುತ್ತಿದ್ದಾರೆ. ತವರಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಎದುರು ನಡೆದ ಪಂದ್ಯದಲ್ಲಿ ಅವರು ನಾಯಕ ಫಾಫ್ ಡು ಪ್ಲೆಸಿಸ್ ವಿಕೆಟ್ ಪಡೆದ ಸಂದರ್ಭವನ್ನು ನೋಡಿದರೆ ಅನುಭವ ಎಂಥದೆನ್ನುವುದು ಅರಿವಾಗುತ್ತದೆ. ಅದು ಹದಿನೇಳನೇ ಓವರ್. ಫಾಫ್ 44 ರನ್ ಗಳಿಸಿದ್ದರು. ನಾಲ್ಕನೇ ಸ್ಟಂಪ್‌ಗಿಂತಲೂ ತುಸು ಆಚೆಗೆ, ವೈಡ್ ಆಗದೇ ಇರಲಿ ಎನ್ನುವ ಗೆರೆಗೆ ಸಮೀಪದಲ್ಲಿಯೇ ಅವರು ಫುಲ್‌ಲೆಂಗ್ತ್ ಬೌಲ್ ಮಾಡಿದರು. ಸ್ವಲ್ಪ ವಿಕೆಟ್ ಬಿಟ್ಟ ಫಾಫ್ ಅದನ್ನು ಮೇಲಕ್ಕೆ ಹೊಡೆದರು. ಚೆಂಡಿನಲ್ಲಿ ತುಸು ಲೆಗ್ ಸ್ಪಿನ್ ಕೂಡ ಇದ್ದಿದ್ದರಿಂದ ಅದು ಕೃನಾಲ್ ಪಾಂಡ್ಯ ಕ್ಯಾಚ್ ಹಿಡಿಯಲು ಪ್ರೇರೇಪಿಸಿತು. ಆರ್‌ಸಿಬಿ ವಿರುದ್ಧ ಮಿಶ್ರಾ ನಾಲ್ಕು ಓವರ್‌ಗಳಲ್ಲಿ 21 ರನ್ ನೀಡಿ ಎರಡು ವಿಕೆಟ್ ಪಡೆದುಕೊಂಡರು.

ಈಗ ಮಿಶ್ರಾ ಅವರ ವಯಸ್ಸು ನಲವತ್ತೂವರೆ ವರ್ಷ. 2018ರಿಂದ 2021ರವರೆಗೆ ಐಪಿಎಲ್‌ನಲ್ಲಿ ದೆಹಲಿ ತಂಡದ ಪರವಾಗಿ ಆಡುತ್ತಿದ್ದಾಗ ಅವರ ಮೌಲ್ಯ ನಾಲ್ಕು ಕೋಟಿ ರೂಪಾಯಿ ಇತ್ತು. ಈ ಬಾರಿ 50 ಲಕ್ಷ ರೂಪಾಯಿ ಬೆಲೆಗೆ ಅಷ್ಟೆ ಅವರನ್ನು ಲಖನೌ ಹರಾಜಿನಲ್ಲಿ ಪಡೆದುಕೊಂಡದ್ದು. ಅಷ್ಟು ವಯಸ್ಸಾದವರು ಯಾರಿಗೆ ತಾನೆ ಬೇಕಾದಾರು? ಮಿಶ್ರಾ ಅವನ್ನೆಲ್ಲ ತಲೆಯಲ್ಲಿ ಇಟ್ಟುಕೊಳ್ಳದೆ ಬೌಲಿಂಗ್ ಮಾಡುವುದನ್ನೇ ಸುಖಿಸುತ್ತಿರುವುದು ಖುಷಿಯ ವಿಚಾರ. ಈ ಸಲ ಆರು ಪಂದ್ಯಗಳಲ್ಲಿ ಅವರು ಅಷ್ಟೆ ಸಂಖ್ಯೆಯ ವಿಕೆಟ್ ಪಡೆದಿದ್ದಾರೆ. ಆದರೆ, ಅವರು ಪ್ರತಿ ಓವರ್‌ಗೆ ಸರಾಸರಿ 7.27 ರನ್‌ಗಳನ್ನಷ್ಟೆ ನೀಡಿದ್ದಾರೆ.

2008ರಿಂದ ಐಪಿಎಲ್‌ನ ಅವರ ಬೌಲಿಂಗ್ ಅನ್ನು ಗಮನಿಸಿದರೆ, ಅವರ ಈ ಎಕಾನಮಿ ರೇಟ್ ಮೂರು ವರ್ಷಗಳಲ್ಲಿ ಮಾತ್ರ (2012,